# ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಅಧಿನಿಮಯದ ಅಪರಾಧಗಳ ವಿಶೇಷ ನ್ಯಾಯಾಲಯ ಮತ್ತು 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು ಜಿಲ್ಲೆ, ರಾಯಚೂರು.

ಸ್ಪೇಷಲ್ .ಸಿ **ಸಂಖ್ಯೆಃ 367/2020**

ಪ್ರಾ.ಸಾ-07

ಚಾ.ಸಾ-08

ಸಾಕ್ಷಿದಾರರು ಕ್ರಮವಾಗಿ ಪ್ರಮಾಣ ವಚನ ಮಾಡಿದರು ದಿನಾಂಕ 06-12-2021.

| | |
|---|---|
| ಸಾಕ್ಷಿದಾರರ ಹೆಸರು | ರಾಮಯ್ಯ |
| ತಂದೆಯ ಹೆಸರು | ದೇವೆಂದ್ರಪ್ಪ |
| ವಯಸ್ಸು | 29 |
| ಉದ್ಯೋಗ | ಪೋಲಿಸ್ ಪೇದೆ-264, ದೇವದುರ್ಗ ಪೋಲಿಸ್ ಠಾಣೆ |
| ವಾಸಸ್ಥಳ | ದೇವದುರ್ಗ |

**ಮುಖ್ಯ ವಿಚಾರಣೆ ಃ ಸಾರ್ವಜನಿಕ ಅಭಿಯೋಜಕ ರಾದ ಮಂಜುನಾಥ ರವರಿಂದ .**

ನಾನು ದಿನಾಂಕ **05-12-2019** ರಿಂದ ದೇವದುರ್ಗ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ **25-06-2020** ರಂದು ರಾತ್ರಿ **11-00** ಗಂಟೆ ಸುಮಾರಿಗೆಚಾ.ಸಾ-**15** ರವರು ಈಪ್ರಕರಣ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ **1**ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಸಲ್ಲಿಸಲು ಆದೇಶ ಮಾಡಿದ ಮೇರೆಗೆ ಮಾರನೆ ದಿನ ಬೆಳೀಗ್ಗೆ ಮಾನ್ಯ ನ್ಯಾಯಾಲಯಕ್ಕೆ ತಲುಪಿಸಿರುತ್ತೇನೆ. ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು ಃ ಆರೋಪಿತರ ಪರವಾಗಿ ಶ್ರೀ ಎಮ್.ಜೆಡ್.ಪಿ ವಕೀಲರಿಂದ ಃ-**

ರಾಯಚುರು-ಕಲಬುರಗಿ ರಾಜ್ಯ ಹೆದ್ದಾರಿಯ ಮೇಲೆ ದೇವದುರ್ಗ ಬರುತ್ತದೆ ಎಂದರೆ ಸರಿ. ಇಡೀ ರಾತ್ರಿ ಬಸ್ಸನ್ನು ಹೊರತು ಪಡಿಸಿ ಬೇರೆ-ಬೇರೆ ವಾಹನಗಳ ಸೌಕರ್ಯ ಇದೆ ಎಂದರೆ ಸರಿ. ದೇವದುರ್ಗ ದಿಂದ ರಾಯಚೂರಿಗೆ ಒಂದು ಗಂಟೆ ಪ್ರಯಾಣ ಇದೆ ಎಂದರೆ ಸರಿಯಲ್ಲ. ಒಂದು ಗಂಟೆ **45** ನಿಮಿಷ ಬೇಕು. ತನಿಖಾಧಿಕಾರಿಯ ಮುಂದೆ ನಾನು ಹೇಳಿಕೆ ಕೊಟ್ಟಿದ್ದೇನೆ. ಆಗ ಸಮಯ ಎಷ್ಟಗಿತ್ತು ಎಂದು ನನಗೆ ಹೇಳಲು ಆಗುವದಿಲ್ಲ. ಅದೇ ದಿನ ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಥಮ ವರ್ತಮಾನ ವರದಿಯನ್ನು ದಿನಾಂಕ **26-06-2020** ರಂದು ಬೆಳೀಗ್ಗೆ **8-00** ಗಂಟೆಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ **25-06-2020** ರಂದು ರಾತ್ರಿ **11-00** ಗಂಟೆ ಸುಮಾರಿಗೆಚಾ.ಸಾ-**15** ರವರು ಈಪ್ರಕರಣ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ **1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಸಲ್ಲಿಸಲು ಆದೇಶ ಮಾಡಿದ ಮೇರೆಗೆ ಮಾರನೆ ದಿನ ಬೆಳೀಗ್ಗೆ ಮಾನ್ಯ ನ್ಯಾಯಾಲಯಕ್ಕೆ ತಲುಪಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಕ್ತ ಉಲ್ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು)
ಓ. ಹೇ. ಕೇ. ಸರಿ ಇದೆ.

1ನೇ ಹೆಚುವ್ಚರಿ ಸತ್ರ ನ್ಯಾಯಾಧೀಶರು,
ರಾಯಚೂರು.